ಮತ್ತು ಎರಡು ನಷ್ಟದಲ್ಲಿ ನಡೆಯುತ್ತಿವೆ. ಇದಕ್ಕೆ ಎಲ್ಲಾ ರೀತಿಯ ಸುಧಾರಣೆಗಳನ್ನು ತರಲು ನಾನು ಪ್ರಯತ್ನಗಳನ್ನು ಮಾಡುತ್ತಿದ್ದೇನೆಂದು ಸದನದಲ್ಲಿ ಅಧ್ಯಕ್ಷರ ಮೂಲಕ ಎಲ್ಲಾ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎಸ್.ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಈಗ ಕೊಟ್ಟಿರುವ 17 ಉತ್ತರದಲ್ಲಿ ಪಾರದರ್ಶತತೆಯನ್ನು ತೋರಿಸುವ ಸಲುವಾಗಿ ಸ್ಟೋರ್ಸ್‌ಗೆ ಸಂಬಂಧಪಟ್ಟಂತೆ ಎಲ್ಲಾ ಹಂತದಲ್ಲೂ ಕಂಪ್ಯೂಟರೀಕರಣಗೊಳಿಸುವ ಬಗ್ಗೆ ಎಲ್ಲಿಯೂ ಹೇಳಿಯೇ ಇಲ್ಲ. ಇದರ ಬಗ್ಗೆ ಸಚಿವರು ಯಾವ ಯೋಜನೆಯನ್ನು ಹಾಕಿಕೊಂಡಿದ್ದಾರೆ ಎಂಬ ಬಗ್ಗೆ ತಿಳಿಸಬೇಕು. ಸಂಸ್ಥೆ ಕೇವಲ ಲಾಭವನ್ನು ಮಾತ್ರ ನೋಡದೇ ಸೇವೆಯ ಕಡೆ ಕೂಡ ಗಮನ ಕೊಡಬೇಕು. ಇಂದು ಮಂಗಳೂರು ವಿಭಾಗ ಲಾಭದಲ್ಲಿಯೇ ಇದೆ. ಇಂದು ಎಲ್ಲಾದರೂ ಪ್ರಯಾಣಿಕರ ಬಸ್ ಎಲ್ಲಾದರೂ ಪಂಕ್ಚರ್ ಅಥವಾ ಇನ್ನಿತರ ಕಾರಣಗಳಿಂದ ಕೆಟ್ಟುನಿಂತರೆ ಮತ್ತೊಂದು ಸಾರಿಗೆ ಸಂಸ್ಥೆಯ ಬಸ್ ಬರುವ ತನಕ ಕಾದು ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಇದೆ.

ಅಧ್ಯಕ್ಷರು : ಅದು ಡಿಪರೆಂಟ್ ಇಶ್ಯೂ ಪ್ರಶ್ನೆಯಾಗುತ್ತದೆ. ಸಚಿವರು ಅವರ ಮೊದಲಿನ ಪ್ರಶ್ನೆಗೆ ಉತ್ತರಿಸಬೇಕು.

ಶ್ರೀ ಸಿ.ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಕರ್ನಾಟ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸೇರಿದಂತೆ ಮತ್ತು ಇನ್ನು ಮೂರು ಮಂಡಳಿಗಳು ಸೇರಿದಂತೆ ಎಲ್ಲಾ ಕಡೆಯಲ್ಲಿಯೂ ಕಂಪ್ಯೂಟರೀಕರಣ ಮಾಡಲು ಸುಮಾರು 7 ಕೋಟಿ ರೂಪಾಯಿಗಳ ಯೋಜನೆಯನ್ನು ಹಮ್ಮಿಕೊಂಡಿದ್ದು ಈಗಾಗಲೇ ಎರಡು ಕೊಟಿ 60 ಲಕ್ಷ ರೂಪಾಯಿ ಗಳನ್ನು ಖರ್ಚು ಮಾಡಲಾಗಿದೆ. ಜಿಲ್ಲಾ ಕೇಂದ್ರಗಳಲ್ಲಿ ರಿಸರ್ವೇಶನ್ ಕೌಂಟರ್‌ನ್ನು ಕಂಪ್ಯೂಟರೀಕರಣದ ಮೂಲಕ ಮಾಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಖರೀದಿ ಸಮಿತಿ ಬಗ್ಗೆ ಕೂಡ ಕಂಪ್ಯೂಟರೀಕರಣ ಮಾಡಲು ನಮ್ಮ ಮುಂದೆ ಕಾರ್ಯಕ್ರಮ ಇದೆ. ಈ ಗಣಕೀಕರಣ ವ್ಯವಸ್ಥೆಯನ್ನು ಆ ಭಾಗದಲ್ಲಿ ಒದಗಿಸಿ ಕೊಡಲಾಗುತ್ತದೆ.

ಮಿನಿ ವಿಧಾನ ಸೌಧ ನಿರ್ಮಾಣ

120 (1283) ಶ್ರೀ ಗುಂಡಪ್ಪ ವಕೀಲ (ಔರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. '' ಮಿನಿ ವಿಧಾನ ಸೌಧ'' ನಿರ್ಮಾಣಕ್ಕಾಗಿ ಸುಮಾರು 10 ವರ್ಷಗಳಿಂದ 5 ಎಕರೆ ಜಮೀನು ಔರಾದ ನಗರದಲ್ಲಿ ಸ್ವಾಧೀನಪಡಿಸಿಕೊಂಡಿರುವುದು ಸರ್ಕಾರಕ್ಕೆ ತಿಳಿದಿದೆಯೆ;

2. '' ಮಿನಿ ವಿಧಾನ ಸೌಧ'' ನಿರ್ಮಾಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮವೇನು;

3. ಈ ವರ್ಷದ ಹಣಕಾಸು ಯೋಜನೆಯಲ್ಲಿ ಇಂತಹ ನಿರ್ಮಾಣ ಕಾರ್ಯ ಆಳವಡಿಸಲಾಗಿದೆಯೇ;

4. ಇಲ್ಲಿಯವರೆಗೆ ಒದಗಿಸಿದ ಹಣವೆಷ್ಟು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

1. 1996ರಲ್ಲಿ ಶ್ರೀ ಚಂದ್ರಪ್ಪ ಹಣಂತರಾದ ಪಾಟೀಲ್‌ರವರು ಉಚಿತವಾಗಿ ನೀಡಿದ 3 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

2 ಹುಡ್ಕೊ ಸಂಸ್ಥೆಯಿಂದ ಸಾಲದ ಸಹಾಯ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.

3. ಇಲ್ಲ

4. ಇಲ್ಲ.

ಶ್ರೀ ಗುಂಡಪ್ಪ ವಕೀಲ: ಮಾನ್ಯ ಅಧ್ಯಕ್ಷರೆ, ಜಿರಾದ್ ತಾಲ್ಲೂಕಿನಲ್ಲಿ ಬಹಳಷ್ಟು ವರ್ಷಗಳಿಂದ ಸರ್ಕಾರಿ ಕಛೇರಿಗಳು ಬಾಡಿಗೆ ಕಟ್ಟಡದಲ್ಲಿಯೇ ನಡೆದುಕೊಂಡು ಬರುತ್ತಿದೆ. ಈಗಾಗಲೇ ಅಲ್ಲಿ ಮಿನಿ ವಿಧಾನಸೌಧ ಕಟ್ಟುವ ಸಲುವಾಗಿ ಮೂರು ಎಕರೆ ಜಾಗವನ್ನು ಖರೀದಿ ಮಾಡಿ ಸ್ಥಳ ಪರಿಶೀಲನೆ ಮಾಡಿ ಡಿ.ಸಿ. ಯವರ ರೆಕಮೆಂಡೇಶನ್ ಮಾಡಿದ ನಂತೆ ಪ್ರಜಾಪ್ರತಿನಿಧಿಗಳು ಶಿಫಾರಸ್ಸು ಮಾಡಿ ಅಕ್ವಜಿಶನ್ ಆದರೆ ಆದನ್ನು ಕಟ್ಟುವ ವ್ಯವಸ್ಥೆ ಇಲ್ಲಿಯವರೆವಿಗೂ ಆಗಿಲ್ಲ. ಇದರ ಬಗ್ಗೆ ಕಂದಾಯಸಚಿವರು ನಿಖರವಾಗಿ ಉತ್ತರಕೊಟ್ಟು ಯಾವಾಗ ಕಟ್ಟಡವನ್ನು ಕಟ್ಟಿಸುತ್ತಾರೆ ಮತ್ತು ಇದಕ್ಕೆ ಯಾವ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಮಿನಿ ವಿಧಾನಸೌಧಗಳು ಸೇರಿದಂತೆ ಏಳು ಜಿಲ್ಲಾಧಿಕಾರಿಗಳ ಕಛೇರಿಯನ್ನು ಕಟ್ಟಲು ಹುಡ್ಕೋದಿಂದ ಸಾಲವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮಂಜೂರಾತಿ ಸಿಕ್ಕುವ ಆಶ್ವಾಸನೆ ಕೂಡ ಸಿಕ್ಕಿದೆ. ಸಾಲ ಮಂಜೂರಾದ ತಕ್ಷಣ ಈ ಎಲ್ಲಾ ಮಿನಿ ವಿಧಾನಸೌಧಗಳ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಗುಂಡಪ್ಪ ವಕೀಲ: ಅಧ್ಯಕ್ಷರೆ, ಇದನ್ನು ಯಾವಾಗ ಕಟ್ಟುತ್ತೀರ ಎಂಬ ಬಗ್ಗೆ ನಿಖರವಾಗಿ ಹೇಳಬೇಕೆಂದೇ ಒಂದೇ ಪ್ರಶ್ನೆಯನ್ನು ನಾನು ಕೇಳುತ್ತಿರುವುದು.

ಶ್ರೀ ಹೆಚ್.ಸಿ.ಶ್ರೀ ಕಂಠಯ್ಯ : ಇಂಥ ದಿನಾಂಕದಂದೇ ಕಟ್ಟಲಾಗುವುದು ಎಂದು ಈಗ ಹೇಳುವುದಕ್ಕಾಗುವುದಿಲ್ಲವಾದರೂ ಮಾನ್ಯ ಸದಸ್ಯರು ಹೇಳಿರುವ ವಿಚಾರದಲ್ಲಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಹೆಚ್.ಪುಟ್ಟರಂಗನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈಗಾಗಲೇ ಉತ್ತರ ನೀಡಿ ಮಿನಿ ವಿಧಾನಸೌಧವನ್ನು ಕಟ್ಟುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಈಗಾಗಲೇ ಆರೇಳು ವರ್ಷಗಳ ಹಿಂದೆಯೇ ಮಿನಿ ವಿಧಾನಸೌಧಗಳನ್ನು ಅರ್ಧಂಬರ್ಧ ಕಟ್ಟಿರುವುದೇನಿದೆ ಅವುಗಳನ್ನು ಯಾವಾಗ ಪೂರ್ಣಗೊಳಿಸುತ್ತಾರೆ ಎಂಬ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಹೆಚ್.ಸಿ.ಶ್ರೀ ಕಂಠಯ್ಯ : ನಾವೇನು ಈಗ ಹುಡ್ಕೋ ಸಾಲವನ್ನು ಕೇಳಿದ್ದೇವೆ ಆ ಹಣದಲ್ಲಿ ಅಪೂರ್ಣಗೊಂಡಿರುವ ಮಿನಿವಿಧಾನಸೌಧಗಳನ್ನು ಕೂಡ ಪೂರ್ಣಗೊಳಿಸಲು ಹಣ ಮೀಸಲಿಡುತ್ತಿದ್ದೇವೆ.